ಮಗು: ನೂರು ವರ್ಷದ ಹಿಂದೆನಾ? ಆಗ ಪರಿಸರ ಚಳವಳಿ ಇತ್ತಾ? ಜಲಮಾಲಿನ್ಯ ಅನ್ನೋದು ಇತ್ತಾ?

ಅವಳು: ಮ್... ನೂರು ವರ್ಷ ಅಲ್ಲ, ನೂರಾ ಆರು ವರ್ಷ ಅನ್ನೋಣ. 1915ರಲ್ಲಿ ಅವರು ಹರದ್ವಾರದ ಕುಂಭಮೇಳಕ್ಕೆ ಹೋಗಿದ್ದರು. ಅಲ್ಲಿ ಹಿಮಾಲಯದ ಭವ್ಯ ದೃಶ್ಯವನ್ನೂ ಗಂಗೆಯ ಭೋರ್ಗರೆತವನ್ನೂ ಕಂಡು ಮೂಕ ವಿಸ್ಮಿತ ಆಗಿದ್ದರು. ಆದರೆ, ಜನ ಅಲ್ಲಿ ಮಾಡ್ತಾ ಇರೋ ಗಲೀಜನ್ನು ನೋಡಿ ತುಂಬಾ ಬೇಜಾರುಪಟ್ಕೊಂಡರು. 'ಯಂಗ್ ಇಂಡಿಯಾ' ಪತ್ರಿಕೇಲಿ ಅದರ ಬಗ್ಗೆ ಬರೆದರು.
ಮಗು: ಏನಂತ ಬರೆದ್ರೂ?

ಅವನು: ಗಾಂಧೀಜಿ ಹೇಳ್ತಾರೆ: (ಅನುಕರಣ ಮಾಡಲು ಯತ್ನಿಸುತ್ತ, ನಡುಗುವ ಕ್ಷೀಣ ಧ್ವನಿಯಲ್ಲಿ) "ಆ ಪವಿತ್ರ ತಾಣಕ್ಕೆ ನಾನು ಎಷ್ಟೊಂದು ಆಸೆ ಇಟ್ಕೊಂಡು ಹೋಗಿದ್ದೆ..."

ಅವಳು: ರೀ – ಒಳ್ಳೇ ಅಜ್ಜನ ಥರಾ ಮಾತಾಡ್ತೀರಲ್ರೀ! ಗಾಂಧೀಜಿ ಕುಂಭಮೇಳಕ್ಕೆ ಹೋಗಿದ್ದು 1915ರಲ್ಲಿ, ನೆನಪಿಟ್ಕೊಳ್ಳಿ... ಅವರಿಗೆ ಆಗ ಹೆಚ್ಚೆಂದರೆ 46–47 ವರ್ಷ ಆಗಿತ್ತು. ಹೆಚ್ಚು ಕಮ್ಮಿ ನಿಮ್ಮಷ್ಟೇ!

ಅವನು: ಓ ಹೌದಲ್ಲ, ಮರೆತೇಬಿಟ್ಟಿದ್ದೆ! ಸರಿ ಮತ್ತೆ ಹೇಳ್ತೇನೆ... (ಗಂಟಲು ಸರಿಪಡಿಸಿಕೊಂಡು ನಾರ್ಮಲ್ ಧ್ವನಿಯಲ್ಲಿ) "ಆ ಪವಿತ್ರ ತಾಣಕ್ಕೆ ನಾನು ಎಷ್ಟೊಂದು ಆಸೆ ಇಟ್ಕೊಂಡು ಹೋಗಿದ್ದೆ... ಆದರೆ ತುಂಬಾನೇ ದುಃಖ ಆಯ್ತು... ಅಲ್ಲಿ ಎಷ್ಟೆಲ್ಲ ಕೊಳಕು ಇತ್ತು. ನೈತಿಕವಾಗಿ, ಭೌತಿಕವಾಗಿ ಗಲೀಜು ತುಂಬಿತ್ತು. ಅಂಥ ಧುಮ್ಮಿಕ್ಕುವ ಧಾರೆಯಲ್ಲಿ ಧರ್ಮದ ಹೆಸರಿನಲ್ಲಿ ಗಲೀಜು ಮಾಡ್ತಾರಲ್ಲ. ನದಿಯ ದಡದಲ್ಲಿ ಶಾಂತವಾಗಿ ಕೂತು ಆ ಸೌಂದರ್ಯವನ್ನು ನೋಡ್ತಾ ನೋಡ್ತಾ ದೇವರ ಸೃಷ್ಟಿಯ ಅದ್ಭುತದ ಬಗ್ಗೆ ಯೋಚನೆ ಮಾಡೋ ಬದಲು, ಅಲ್ಲಲ್ಲೇ ಶೌಚ ಮಾಡ್ತಾರೆ, ಅದೇ ನೀರಲ್ಲಿ ತೊಳ್ಕೋತಾರೆ,

